ಇ) 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಹಾಗೂ ರೂ.16, 625.79 ಲಕ್ಷ ಬಂಡವಾಳ ಹೂಡಲಾಗಿದೆ.

ಈ) 67, 184 ಜನರಿಗೆ ಉದ್ಯೋಗಾವಾಕಾಶ ದೊರೆತಿದೆ.

ಶ್ರೀ ಬಿ.ಎಂ. ಇದಿನಬ್ಬ : ಸನ್ಮಾನ್ಯ ಅಧ್ಯಕ್ಷರೆ, ಬಂದರುಗಳ ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆಯೆಂದು ನಾನು ಕೇಳಿರುವ ಪ್ರಶ್ನೆಗೆ ಉತ್ತರಿಸಿದ್ದಾರೆ. ಕೈಗಾರಿಕೆಗಳ ಬಗ್ಗೆ ನಾವು ಆಲೋಚಿಸುವುದು ಬಹಳ ಕಡಿಮೆಯೆಂದು ಕಾಣಿಸುತ್ತದೆ. ಆದುದರಿಂದ, ಸಣ್ಣ ಕೈಗಾರಿಕೆಗಳನ್ನು ವಿಸ್ತೃತವಾಗಿ ಇನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವುದಕ್ಕೆ ತಾವು ಮನಸ್ಸು ಮಾಡುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹಮದ್ ಮಾನ್ಯ ಅಧ್ಯಕ್ಷರೆ, 1993-94ನೇ ಸಾಲಿನವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರ ಬಹಳ ಆಸಕ್ತಿಯಿಂದ ಕೈಗಾರಿಕಾ ನೀತಿಯಲ್ಲಿ ಬಹಳಷ್ಟು ಪ್ರೋತ್ಸಾಹ ಕೊಡುವ ಕುರಿತು ಈಗಾಗಲೇ ಹೊಸ ನೀತಿಯೊಂದನ್ನು ಅಳವಡಿಸಿಕೊಂಡಿದೆ. ಆ ದೃಷ್ಟಿಯಿಂದ ಆ ಭಾಗಗಳಲ್ಲಿ ಕೈಗಾರಿಕೋದ್ಯಮಿಗಳು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದರೆ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರೋತ್ಸಾಹ ಕೊಡುವುದರ ಜೊತೆಗೆ ಸಹಾಯಧನವನ್ನು ಸಹ ಒದಗಿಸಿ ಕೊಡುವುದಕ್ಕೆ ಸರ್ಕಾರ ಸದಾ ಸಿದ್ಧವಾಗಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : 1993ನೇ ಡಿಸೆಂಬರ್‌ವರೆಗೆ 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಒಟ್ಟು 16,625.79 ಲಕ್ಷ ರೂಪಾಯಿಗಳ ಬಂಡವಾಳ ಹೂಡಲಾಗಿದೆಯೆಂದು ಹೇಳಿದ್ದೀರಿ. ಬಂಡವಾಳ ಹೂಡಿಕೆಗನುಗುಣವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಅಲ್ಲಿ ಲಾಭದಾಯಕವಾಗಿ ನಡೆಯುತ್ತಿವೆಯೇ ಮತ್ತು ಸರಿಯಾಗಿ ಕೆಲಸಗಳು ನಡೆಯುತ್ತಿವೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಅನೇಕ ಸಣ್ಣ ಕೈಗಾರಿಕೆಗಳು ಆ ಜಿಲ್ಲೆಯಲ್ಲಿ ಬಹಳ ಉತ್ತಮವಾದ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೆ, ಕೆಲವು ಕೈಗಾರಿಕೆಗಳು ಮಾತ್ರ ರೋಗಗ್ರಸ್ತವಾಗಿವೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ, ಕೈಗಾರಿಕೆಗಳನ್ನು ಸುವ್ಯವಸ್ಥಿತವಾಗಿ ನಡೆಸುವುದರ ಬಗ್ಗೆ ಸರ್ಕಾರ ಆಗಲೇ ಅನೇಕ ತೀರ್ಮಾನಗಳನ್ನು ಕೈಗೊಂಡಿದ್ದು, ಮುಂಬರುವ ದಿನಗಳಲ್ಲಿ ಕೈಗಾರಿಕೆಗಳನ್ನು ಬಹಳ ಉತ್ತಮವಾಗಿ ನಡೆಸುವಂಥ ಅವಕಾಶಗಳು ಸಾಕಷ್ಟಿದೆ. ಅದಕ್ಕಾಗಿ ಸರ್ಕಾರ ಪ್ರೋತ್ಸಾಹ ಕೊಡುವುದಕ್ಕೆ 'ಸಿಂಗಲ್ ವಿಂಡೋ ವಿಜಿನ್ಸಿ' ಎಂದು ನಾವೇನು ರೂಪಿಸಿಕೊಂಡಿದ್ದೇವೆ, ಅದರ ಮುಖೇನ ಪ್ರೋತ್ಸಾಹ ನೀಡಲಾಗುತ್ತದೆ.

ತುಮಕೂರು ಮಹಾನಗರ ಸಭೆ ರಚಿಸುವ ಬಗ್ಗೆ

174 (ಎ) - ಶ್ರೀ ಶಫಿ ಅಹಮದ್, (ತುಮಕೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಮಹಾನಗರ ಸಭೆಯನ್ನು ರಚಿಸುವಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು)

ಅ) ಕೆ.ಎಂ.ಸಿ.ಕಾಯ್ದೆ 1976ರ ಕಲಂ (3)ರಡಿಯಲ್ಲಿ ತುಮಕೂರು ಮಹಾನಗರಸಭೆಯನ್ನು ರಚಿಸಲು ಸರ್ಕಾರವು ದಿನಾಂಕ 17-5-93ರಂದು ಒಂದು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿತು. ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ರಲ್ಲಿ ಮುನ್ಸಿಪಲ್

ಕಾರ್ಪೊರೇಷನ್‌ಗಳನ್ನು ರಚಿಸಲು ಕೆಲವು ಮಾನದಂಡಗಳಾದ ಜನಸಂಖ್ಯೆ, ಆದಾಯ, ಜನಸಾಂದ್ರತೆ, ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗ ಮಾಡುತ್ತಿರುವವರ ಜನಸಂಖ್ಯೆ ಮತ್ತು ಆಯಾ ಕ್ಷೇತ್ರದ ಆರ್ಥಿಕ ಪ್ರಾಮುಖ್ಯತೆ ಇವುಗಳನ್ನು ನಿಗದಿಪಡಿಸಲಾಗಿದೆ. ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992 ರನ್ವಯ, ರಾಜ್ಯದ ಮುನ್ಸಿಪಲ್ ಕಾಯ್ದೆಗಳಿಗೆ ಸೂಕ್ತ ತಿದ್ದುಪಡಿ ಮಾಡಿ ದಿನಾಂಕ 1-6-94 ರಿಂದ ಇವುಗಳನ್ನು ಜಾರಿಗೆ ತರಲಾಗುವುದು. ಈ ಹಿನ್ನೆಲೆಯಲ್ಲಿ, ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ರ ಉಪಬಂಧಗಳ ಪ್ರಕಾರ, ಕಳೆದ ಜನಗಣತಿಯ ಅನ್ವಯ 3 ಲಕ್ಷ ಜನಸಂಖ್ಯೆ ಮತ್ತು 600 ಲಕ್ಷ ರೂ.ಗಳ ಆಧಾಯ ಹೊಂದಿರುವ ನಗರವನ್ನು ಮಾತ್ರ ಒಂದು ಮಹಾನಗರ ಸಭೆಯನ್ನಾಗಿ ಸ್ಥಾಪಿಸಲು ನಿರ್ಧರಿಸಿದೆ. 1991ರ ಅಂಕಿಅಂಶಗಳ ಪ್ರಕಾರ ತುಮಕೂರು ನಗರಸಭೆಯು ಜನಸಂಖ್ಯೆ ಮತ್ತು ಆದಾಯದ ಈ ಅಳತೆಗೋಲುಗಳನ್ನು ಪಾಲಿಸದೇ ಇರುವುದರಿಂದ, ಇದನ್ನು ಮಹಾ ನಗರಸಭೆಯನ್ನಾಗಿ ಸ್ಥಾಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಫಿ ಅಹಮದ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿರುವಂತೆ ಕೆ.ಎಂ.ಸಿ.ಕಾಯ್ದೆಯ ಪ್ರಕಾರ ದಿನಾಂಕ 17.5.93ರಲ್ಲಿ ತುಮಕೂರು ನಗರವನ್ನು ಕಾರ್ಪೊರೇಷನ್ ಆಗಿ ಪರಿವರ್ತಿಸಲು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಆದಾದ ನಂತರ 74ನೇ ತಿದ್ದುಪಡಿ ಜಾರಿಗೆ ಬಂದನಂತರ ತುಮಕೂರು ನಗರವನ್ನು ಕಾರ್ಪೊರೇಷನ್ ಆಗಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಉತ್ತರಿಸಿದ್ದಾರೆ. ಆದರೆ ಇವೊತ್ತು ಬಹಳ ಮಹತ್ವವಾಗಿರತಕ್ಕಂಥಾದ್ದು ಏನೆಂದರೆ, ಸುಮಾರು ಒಂದು ಲಕ್ಷ ಜನಸಂಖ್ಯೆಯಿರುವ ಪ್ರದೇಶದ ವ್ಯಾಪ್ತಿಗೆ ಸಂಬಂಧಿಸಿದಂತೆ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿರುವುದರಿಂದ ಅಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಯಾವುದೇ ವಿಧವಾದ ಸೌಲಭ್ಯಗಳನ್ನು ನಗರಸಭೆ ವತಿಯಿಂದಾಗಲಿ ಇಲ್ಲವೆ ಮಂಡಲದ ವತಿಯಿಂದಾಗಲಿ ಕೊಡುವುದಕ್ಕಾಗುತ್ತಿಲ್ಲ. ಈ ದಿಸೆಯಲ್ಲಿ ತಾವು ಯಾವ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಿ? ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವುದು ನಿಜ. ನಾವು ಈಗಾಗಲೇ ತುಮಕೂರು, ಬಳ್ಳಾರಿ, ದಾವಣಗೆರೆಯನ್ನು ಕಾರ್ಪೊರೇಷನ್ ಆಗಿ ಪರಿವರ್ತಿಸಬೇಕೆಂದು ತೀರ್ಮಾನಿಸಿದ್ದೇವೆ. ಈಗ ಇರತಕ್ಕಂಥ ಹಳೆಯ ಕಾಯ್ದೆಯ ಪ್ರಕಾರ ಜನಸಂಖ್ಯೆ 2 ಲಕ್ಷವಿದ್ದು, ವರಮಾನ 1 ಕೋಟಿ ಇದ್ದರೆ ಅದನ್ನು ನಗರಸಭೆಯನ್ನಾಗಿ ಮಾಡಬೇಕೆಂದು ನಾವು ತಿಳಿದಿದ್ದೆವು. ಆದರೆ, ಒಳ್ಳೆಯದೇ ಆಗಿದೆಯೆಂದು ತಿಳಿದುಕೊಂಡಿದ್ದೇವೆ. 74ನೇ ತಿದ್ದುಪಡಿ ಪ್ರಕಾರ ಜನಸಂಖ್ಯೆ 3 ಲಕ್ಷ ಇರಬೇಕು ಮತ್ತು ಪರ್ ಕ್ಯಾಪಿಟಾ ಇನ್ ಕಮ್ 200 ರೂಪಾಯಿ ಇರಬೇಕೆಂದು ಹಾಕಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ತುಮಕೂರಿನ ಜನಸಂಖ್ಯೆ 2.18 ಲಕ್ಷ ಇದೆ. ನಂತರ ಅಲ್ಲಿರತಕ್ಕಂಥ ಜನರಿಗೆ ಬರತಕ್ಕಂಥ ಹಾಲಿ ಇನ್ಕಮ್ ಅನ್ನು ಲೆಕ್ಕಹಾಕಿದರೆ 1 ಕೋಟಿ 18 ಲಕ್ಷ ರೂಪಾಯಿಗಳಾಗುತ್ತದೆ. ಈಗ 74ನೇ ತಿದ್ದುಪಡಿ ಪ್ರಕಾರ ಲೆಕ್ಕ ಹಾಕಿದರೆ ತುಮಕೂರಿಗೆ 6 ಕೋಟಿ ರೂ.ಗಳು ಬೇಕಾಗುತ್ತದೆ. ಆದುದರಿಂದ, ತುಮಕೂರನ್ನು ಕಾರ್ಪೊರೇಷನ್ ಆಗಿ ಮಾಡುವುದಕ್ಕಾಗುವುದಿಲ್ಲ, ಅದು ಸಿ.ಎಂ.ಸಿ. ಯಾಗೇ ಇರಲಿ. ಜೊತೆಗೆ ಯಾವ್ಯಾವ ಏರಿಯಾಗಳನ್ನು ಸೇರಿಸಬೇಕೆಂದು ನೋಟಿಫೈ ಮಾಡಲಾಗಿದೆಯೋ ಅದರಂತೆ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಲು ಸಿಎಂಸಿಗೆ ನಾವು ಸೌಲಭ್ಯಗಳನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಶಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿ ಸೇರಿಸಿಕೊಂಡಿರುವ ಪ್ರದೇಶಗಳು ಹಿಂದೆ ಮಂಡಲ್ ಪಂಚಾಯತಿಯ ವ್ಯಾಪ್ತಿಯಲ್ಲಿದ್ದವು. ಆ ಪ್ರದೇಶಗಳಿಗೆ ಈಗ ಮಂಡಲದಿಂದಾಗಲೀ ಜಿಲ್ಲಾ ಪರಿಷತ್ತಿನಿಂದಾಗಲಿ ಯಾವುದೇ ಸೌಲಭ್ಯಗಳನ್ನು ಕೊಡುತ್ತಿಲ್ಲ. ಆದುದರಿಂದ, ಆ ಭಾಗದ ಜನತೆಗೆ ಮೂಲಭೂತ ಅಗತ್ಯಗಳಾದ ಶೌಚಾಲಯ, ಕುಡಿಯುವ ನೀರು ಮತ್ತು ಎಲೆಕ್ಟ್ರಿಫಿಕೇಶನ್ ಏನು ಒದಗಿಸಬೇಕಾಗಿದೆಯೋ ಅದನ್ನಾದರೂ ಒದಗಿಸಿಕೊಡುವುದಕ್ಕೆ ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ : ಇದು ಬಹಳ ಮುಖ್ಯವಾದಂಥ ವಿಚಾರ. ಇದು ತುಮಕೂರಿಗೆ ಮಾತ್ರವಲ್ಲ ಬೇರೆ ಕಡೆ ಸಹ ಇದೆ. ಅದನ್ನು ಬೇಗ ಸೇರಿಸಿಬಿಟ್ಟು ತಕ್ಷಣ ಆ ಸೌಲಭ್ಯಗಳನ್ನು ಕೊಡಲು ಪ್ರಯತ್ನ ಮಾಡುತ್ತೇವೆ.

ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಗೆ ಹಣ ಬಿಡುಗಡೆ ಆಗಿರುವ ಬಗ್ಗೆ

22 - ಶ್ರೀ ಎ.ಟಿ. ರಾಮಸ್ವಾಮಿ. (ಅರಕಲಗೂಡು) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91, 91-92 ಮತ್ತು 92-93ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಗೆ ವಿವಿಧ ಯೋಜನೆಗಳಿಗೆ ಮಂಜೂರಾದ ಹಣ ಎಷ್ಟು?

ಆ) ಅದರಲ್ಲಿ ರಾಜ್ಯ ಸರ್ಕಾರದವರು ಉಪಯೋಗಿಸಿಕೊಂಡ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳಿಗೆ ಮಂಜೂರಾದ ಮತ್ತು ಉಪಯೋಗಿಸಿಕೊಂಡ ಹಣದ ವಿವರ ಈ ಕೆಳಗಿನಂತಿದೆ.

ರೂ. ಲಕ್ಷಗಳಲ್ಲಿ

ಆ) ವರ್ಷ	ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಹಣ	ರಾಜ್ಯ ಸರ್ಕಾರ ಉಪಯೋಗಿಸಿ ಕೊಂಡ ಹಣ
1990-91	1611.82	1611.82
1991-92	2427.67	2342.53
1992-93	2583.138	2392.118

ಶ್ರೀ ಎ.ಟಿ.ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ವತಿಯಿಂದ ಸಮಾಜಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳಿಗೆ 1991-92ನೇ ಸಾಲಿನಲ್ಲಿ 2427 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ಆದರೆ ಇವರು ಆ ಹಣದ ಪೈಕಿ 2342 ಲಕ್ಷ ರೂಪಾಯಿಗಳನ್ನು ಉಪಯೋಗಿಸಿಕೊಂಡಿದ್ದಾರೆ. ಅಂದರೆ ಸುಮಾರು 85 ಲಕ್ಷ ರೂಪಾಯಿಗಳನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗಿಲ್ಲ. 1992-93ರಲ್ಲಿ ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಹಣ 2583ಲಕ್ಷ ಆದರೆ ಇವರು ಉಪಯೋಗಿಸಿಕೊಂಡಿರತಕ್ಕದ್ದು 2392 ಲಕ್ಷ. ಅಂದರೆ 191 ಲಕ್ಷರೂಪಾಯಿಗಳನ್ನು ಇವರು ಉಪಯೋಗ ಮಾಡಿಕೊಳ್ಳಲು ಆಗಲಿಲ್ಲ. ಕೇಂದ್ರ ಸರ್ಕಾರದಿಂದ ಕೊಟ್ಟಂಥ ಹಣವನ್ನು ಕೂಡ ರಾಜ್ಯ ಸರ್ಕಾರ ಬಡವರ ಕಾರ್ಯಕ್ರಮಕ್ಕೆ ಉಪಯೋಗ ಮಾಡಿಕೊಳ್ಳಲಿಲ್ಲ ಎನ್ನತಕ್ಕದ್ದು ನಿಜಕ್ಕೂ ವಿಷಾದನೀಯ. ವಿತಕ್ಕಾಗಿ ಖರ್ಚು ಮಾಡಲಿಲ್ಲ? ವಿತಕ್ಕಾಗಿ ಉಪಯೋಗ ಮಾಡಿಕೊಳ್ಳಲಿಲ್ಲ ಎನ್ನುವುದನ್ನು ದಯಮಾಡಿ ತಿಳಿಸಬೇಕು.